**OS-47/2019 P.W.2**

ದಿನಾಂಕ 16.01.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**<u>ಪಾಟೀ ಸವಾಲು</u>** ಃ ಪ್ರತಿವಾದಿಯ ಪರ ವಕೀಲರಿಂದ ಃ-

ನಾನು ಹೋಟೆಲ್ ವ್ಯಾಪಾರ ಮಾಡುತ್ತೇನೆ. 13.05.2001 ರಲ್ಲಿ ನನ್ನ ಮದುವೆ ಆಗಿರುತ್ತದೆ. ದಾವಾ ಸ್ವತ್ತನ್ನು ನಾನು ನೋಡಿರುತ್ತೇನೆ. 1978 ರಲ್ಲಿ ನನ್ನ ಮಾವ ರಾಘವನ್ ರವರಿಗೆ ದಾವಾ ಸ್ವತ್ತು ಮಂಜೂರಾಗಿರುತ್ತದೆ. ಸದರಿ ಮಂಜೂರಿ ಆಗುವ ಕಾಲಕ್ಕೆ ನನ್ನ ಮಾವ ಜಮೀನು ಕೆಲಸ ಮಾಡುತ್ತಿದ್ದರು. ಸದರಿ ದಾವಾ ಆಸ್ತಿಯನ್ನು ಹೊರತುಪಡಿಸಿ ನನ್ನ ಮಾವನಿಗೆ ಬೇರೆ ಯಾವುದೇ ಜಮೀನು ಇಲ್ಲ. ನನ್ನ ಮಾವನನ್ನು ಹೊರತುಪಡಿಸಿ ಬೇರೆಯವರಿಗೆ ಜಮೀನು ಮಂಜೂರಾದ ಬಗ್ಗೆ ನನಗೆ ಗೊತ್ತಿಲ್ಲ. ಜಮೀನು ಮಂಜೂರಾಗುವ ಮೊದಲು ತಣಿಗೆ ಬೈಲು ಶಾಖೆಯ ವಿ ಐ ಎಸ್ ಎಲ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಫ್ಯಾಕ್ಟರಿಯನ್ನು ಮುಚ್ಚಿದ ನಂತರ ಭದ್ರಾವತಿಯ ವಿ ಐ ಎಸ್ ಎಲ್ ಮೂಲ ಫ್ಯಾಕ್ಟರಿಗೆ ಬಂದಿರುತ್ತಾರೆ ಎಂದರೆ ಸರಿ. ಭದ್ರಾವತಿಗೆ ಆ ರೀತಿ ಅವರು ಬಂದಿದ್ದು ಯಾವಾಗ ಎಂದು ನನಗೆ ನೆನಪಿಲ್ಲ. 1987-88 ರಲ್ಲಿ ನನ್ನ ಮಾವ ಆ ರೀತಿ ಭದ್ರಾವತಿಗೆ ಬಂದಿರುತ್ತಾರೆಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತುನ್ನು ನನ್ನ ಮಾವ 1987 ರಲ್ಲಿ ಮಲ್ಲಪ್ಪನವರ ಮಗ ನೀಲಕಂಠಪ್ಪನವರಿಗೆ ಕ್ರಯ ಕರಾರು ಮಾಡಿಕೊಟ್ಟಿರುತ್ತಾರೆಂದರೆ ನನಗೆ ಆ ಬಗ್ಗೆ ಗೊತ್ತಿಲ್ಲ. ಆ ಬಗ್ಗೆ ಒಂದು ಪತ್ರ ಸಹ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. 1996 ರಲ್ಲಿ ಸದರಿ ನೀಲಕಂಠಪ್ಪ ಪ್ರತಿವಾದಿಗೆ ದಾವಾ ಆಸ್ತಿಯನ್ನು ವಹಿಸಿಕೊಟ್ಟಿರುತ್ತಾರೆಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ ನನ್ನ ಅತ್ತೆಯವರು ಹೇಳಿದಂತೆ ನನ್ನಮಾವ 2006 ರವರೆಗೂ ಸದರಿ ಜಮೀನನ್ನು ಮಾಡುತ್ತಿದ್ದರು ಎಂದು ನುಡಿಯುತ್ತಾರೆ. 1996 ರಿಂದ ಪ್ರತಿವಾದಿಯು ದಾವಾ ಆಸ್ತಿಯ ಸ್ವಾಧಿನದಲ್ಲಿ ಇರುತ್ತಾರೆಂದರೆ ಸರಿಯಲ್ಲ. ನನ್ನ ಮಾವ ದಾವಾ ಆಸ್ತಿಯಲ್ಲಿ ಭತ್ತ ಬೆಳೆಯುತ್ತಿದ್ದರು. ದಾವಾ ಆಸ್ತಿಯ ಎಲ್ಲಾ ಪಹಣಿ ಪತ್ರಿಕೆಯಲ್ಲಿ ಏನು ಬೆಳೆ ಬೆಳೆಯುತ್ತಿದ್ದಾರೆಂದು ನಮೂದು ಇದೆ ಎಂದು ನನಗೆ ಗೊತ್ತಿದೆ. ನಾನು ಹಾಜರು ಪಡಿಸಿರುವ ಪಹಣಿಗಳ ಪ್ರಕಾರ ಭತ್ತ ಎಂದು ನಮೂದು ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು 2016 ರಲ್ಲಿ ನಾನು ಅಡಿಕೆ ಹಾಕಿದ್ದು ಆ ಬಗ್ಗೆ ಪಹಣಿಯಲ್ಲಿ ಬದಲಾವಣೆ ಮಾಡಿಸಬೇಕೆಂದು ನುಡಿಯುತ್ತಾರೆ. 2016 ರಿಂದ 2019 ರವರೆಗೆ ನಾನು ಆ ರೀತಿ

ಪಹಣಿಯಲ್ಲಿ ಬದಲಾಯಿಸಲು ಪ್ರಯತ್ನ ಮಾಡಿಲ್ಲ ಎಂದರೆ ನಾನು ಹೊಸದಾಗಿ ಮಾಡುತ್ತಿದ್ದ ಕಾರಣ ನನಗೆ ಮಾಡಿಸಲು ಗೊತ್ತಾಗಲಿಲ್ಲ ಎಂದು ನುಡಿಯುತ್ತಾರೆ. 03.11.2016 ರಂದು ನನ್ನ ಹೆಂಡತಿ, ನನ್ನ ಹೆಂಡತಿಯ ಅಣ್ಣ ಮತ್ತು ನನ್ನ ಅತ್ತೆ ಸೇರಿ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಪ್ರತಿವಾದಿಯ ಹೆಸರಿಗೆ ಕ್ರಯ ಕರಾರು ಪತ್ರ ಮಾಡಿಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಾನು ನನ್ನ ಅತ್ತೆಯ ಜೊತೆಯಲ್ಲಿ ಇದ್ದು ಅವರ ಜೊತೆ ವ್ಯವಸಾಯಕ್ಕೆ ಮತ್ತು ಪೊಲೀಸ್ ಠಾಣೆಗೂ ಸಹ ಹೋಗಿರುತ್ತೇನೆ. ದಿಃ 20.12.2018 ರಂದು ನನ್ನ ಅತ್ತೆ ಪ್ರತಿವಾದಿಯ ವಿರುದ್ಧ ಲಿಂಗದಹಳ್ಳಿ ಪೊಲೀಸ್ ಠಾಣೆಯಲ್ಲಿ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ದೂರನ್ನು ನೀಡಲು ಹೋಗಿದ್ದು ನಾನು ಸಹ ಅವರ ಜೊತೆ ಹೋಗಿದ್ದೆ ಎಂದರೆ ಸರಿ. ಆ ಸಮಯದಲ್ಲಿ 2016 ರ ಮೇಲೆ ಹೇಳಿದ ಕ್ರಯ ಕರಾರಿನ ನಕಲು ಹಾಗೂ 1987 ರಲ್ಲಿ ನನ್ನ ಮಾವ ಬರೆದುಕೊಟ್ಟ ಕ್ರಯ ಕರಾರು ಪತ್ರದ ನಕಲನ್ನು ನನ್ನ ಅತ್ತೆ ದಾಖಲು ಮಾಡಿದ ಸದರಿ ದೂರಿಗೆ ಸೇರಿಸಿ ಕೊಟ್ಟಿರುತ್ತೇವೆಂದರೆ ಸರಿಯಲ್ಲ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲವಾಕಾಶ ಕೋರಿದ್ದು, ನ್ಯಾಯದ ಹಿತದೃಷ್ಟಿಯಿಂದ ಪಾಟೀ ಸವಾಲು ಮಾಡಲು ಕಾಲವಕಾಶವನ್ನು ನೀಡಿ ಮುಂದಿನ ಮುದ್ದತ್ತಿಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.

(ಸಂತೋಷ ಕುಮಾರ್ ಪಿ. ಎಸ್.)
ಸಿವಿಲ್ ನ್ಯಾಯಾಧೀಶರು ಮತ್ತು ಹೆ. ಪ್ರ.ದ.ನ್ಯಾ.ದಂ.ರವರು,
ತರೀಕೆರೆ.